**ದಿನಾಂಕಃ 10.09.2025 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಶ್ರೀಃ ಎಸ್.ಸಿ.ಎಂ. ರವರಿಂದ.**

(ಸಾಕ್ಷಿಗೆ ಕನ್ನಡ ಭಾಷೆಯು ಬರದೆ ಇರುವುದರಿಂದ ಮರಾಠಿ ಭಾಷೆಯಲ್ಲಿ ಕೇಳಿದ ಪ್ರಶ್ನೆಗಳನ್ನು ಅರ್ಥೈಸಿಕೊಂಡು ಉಭಯ ಪಕ್ಷಗಾರರ ವಕೀಲರ ಉಪಸ್ಥಿತಿ ಮೇರೆಗೆ ತರ್ಜುಮೆ ಮಾಡಿ ಕನ್ನಡ ಭಾಷೆಯಲ್ಲಿ ಸಾಕ್ಷ್ಯವನ್ನು ದಾಖಲಿಸಿಕೊಳ್ಳಲಾಯಿತು. ಕನ್ನಡ ಭಾಷೆಗೆ ತರ್ಜುಮೆ ಮಾಡಿ ನೀಡಿದ ಸಾಕ್ಷ್ಯವನ್ನು ದಾಖಲಿಸಿಕೊಳ್ಳಲು ಉಭಯ ಪಕ್ಷಗಾರರ ಪರ ವಕೀಲರು ಯಾವುದೇ ತಕರಾರು ಇಲ್ಲವೆಂದು ತಿಳಿಸಿರುತ್ತಾರೆ.)

3. ನನ್ನ ತಂದೆ ವಾಸುದೇವ ಯಲ್ಲಪ್ಪ ಮರಗಣಾಚೆ ಇವರು 5 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನನ್ನ ತಂದೆಗೆ 4 ಗಂಡು ಮಕ್ಕಳು ಅವರ ಹೆಸರು ಪೀರಾಜಿ, ಜ್ಯೋತಿಭಾ, ಯಲ್ಲಪ್ಪ ಮತ್ತು ಮಲ್ಲಪ್ಪ ಮತ್ತು 1 ಹೆಣ್ಣು ಮಗಳ ಹೆಸರು ಫಕೀರ ಬಾಯಿ. ನನ್ನ ತಾಯಿಯ ಹೆಸರು ದೇವಕ್ಕ ವಾಸುದೇವ ಮರಗಣಾಚೆ. ವಾರಸ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಹಾಜರುಪಡಿಸಲು ಅಡಚಣೆ ಇರುವುದಿಲ್ಲ. ಈ ದಾವೆಯಲ್ಲಿ 5 ಜನರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೀರಿ ಎಂದರೆ ಸರಿ. ತುಳಸವ್ವ ಹಾಗೂ ಬಾಳೆವ್ವ ಇವರು ಡೈರಿ ನಂಬರ್ 467 ದಿನಾಂಕ 25.04.1927 ಇದರಲ್ಲಿ ನಮೂದಿಸಿಂದತೆ ಹೊಳೆಪ್ಪ ಕೋಷ್ಟಿ ಇವರಿಗೆ 10 ವರ್ಷಗಳ ಕಾಲಕ್ಕೆ 200 ರೂಪಾಯಿಗಳಿಗೆ ಕಬ್ಜೆ ಗಹನೆ ನೀಡಿರುತ್ತಾರೆ ಎಂದರೆ ಸಾಕ್ಷಿಯು ಸರಿ ಎನ್ನುತ್ತಾರೆ. ದಿನಾಂಕಃ 26.04.1943 ರಂದು ನೊಂದಾಯಿತ ಕ್ರಯಪತ್ರದ (132/1943) ಮೂಲಕ ಪ್ರತಿವಾದಿಯವರ ತಂದೆ ನಾರಾಯಣ ಯಲ್ಲಪ್ಪ ತಿಮ್ಮಣ್ಣಾಚೆ ಅವರು ಬಾಳವ್ವ ಮೀನಪ್ಪ ತಿಮಣ್ಣಾಚೆ, ತುಳಸ

ಗೋವಿಂದ ಅಪ್ಪಯ್ಯಾಚೆ, ನಾಗವ್ವ ತಪ್ಪಣ್ಣ ಹನುಮಾಜಿಚೆ ರವರಿಂದ ದಾವಾ ಸ್ವತ್ತನ್ನು 300/- ರೂ.ಗಳಿಗೆ ಖರೀದಿಸಿರುತ್ತಾರೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ದಿನಾಂಕಃ 02.06.1959ರ ಡೈರಿ ನಂಬರ್ 1614ನ್ನು ಹಾಜರುಪಡಿಸಿರುತ್ತೇನೆ. ಹೊಳೆಪ್ಪ ಕೋಷ್ಟಿ ರವರಿಗೆ ಕೊಟ್ಟಿರುವ ಕಬ್ಜೆ ಗಹನೆಯನ್ನು ಬಾಳವ್ವ, ತುಳಸವ್ವ ಹಾಗೂ ನಾಗವ್ವ ರವರು 200/- ರೂ.ಗಳನ್ನು ಪಾವತಿಸಿ ಬಿಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನಾರಾಯಣ ಅವರು 300/- ರೂ.ಗಳಲ್ಲಿ 200/- ರೂ.ಗಳನ್ನು ಹೊಳೆಪ್ಪ ಕೋಷ್ಟಿರವರಿಗೆ ನೀಡಿ ಉಳಿದ 100/-ರೂ.ಗಳನ್ನು ತಮ್ಮ ಖರ್ಚಿಗಾಗಿ ಉಳಿಸಿಕೊಂಡಿರುತ್ತಾರೆ ಎಂದರೇ ಸಾಕ್ಷಿಯು ಸರಿ ಎನ್ನುತ್ತಾರೆ. ಸರ್ವೇ ನಂ. 284 ರ ಪೈಕಿ 1/4 ಭಾಗದಷ್ಟು ವಿಸ್ತೀರ್ಣದ ಜಮೀನನ್ನು ಪ್ರತಿವಾದಿಯವರ ತಂದೆ ನಾರಾಯಣ ಯಲ್ಲಪ್ಪ ತಿಮ್ಮಣ್ಣಾಚೆ ರವರು ಖರೀದಿಸಿರುತ್ತಾರೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಹೊಳೆಪ್ಪ ಕೋಷ್ಟಿ ರವರಿಂದ ಕಬ್ಜೆ ಗಹನೆ ಪಡೆದುಕೊಂಡು ಪ್ರತಿವಾದಿಯವರ ತಂದೆ ನಾರಾಯಣ ಯಲ್ಲಪ್ಪ ತಿಮ್ಮಣ್ಣಾಚೆ ರವರು ಕಬ್ಜೆಯಲ್ಲಿಸಿದ್ದು ದಾವಾ ಸ್ವತ್ತಿನ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ. ನಾರಾಯಣ ಯಲ್ಲಪ್ಪ ತಿಮ್ಮಣ್ಣಾಚೆ ರವರು 1994 ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ಅವರು ಮೃತರಾದ ನಂತರ ಅವರ ವಾರಸುದಾರರು ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ.

4. ಬಾಳವ್ವ, ತುಳಸ, ನಾಗವ್ವ ರವರು ನಿಮ್ಮ ತಂದೆಯ ಪೂರ್ವಜರು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ

ಸಾಕ್ಷಿಯು ಹಾಜರುಪಡಿಸಿಲ್ಲ, ಹಾಜರುಪಡಿಸಲು ಅಡಚಣೆ ಇಲ್ಲ ಎನ್ನುತ್ತಾರೆ. ಬಾಳವ್ವ, ತುಳಸ, ನಾಗವ್ವ ರವರು ದಾವಾ ಸ್ವತ್ತನ್ನು ಕ್ರಯ ಪತ್ರದ ಮೂಲಕ ನಾರಾಯಣ ಯಲ್ಲಪ್ಪ ತಿಮ್ಮಣ್ಣಾಚೆ ರವರಿಗೆ 1943 ರಲ್ಲಿ ಮಾರಾಟ ಮಾಡಿರುವುದರಿಂದ ಅವರು ದಾವಾ ಸ್ವತ್ತಿನ ಮಾಲೀಕರಾಗಿರುತ್ತಾರೆ ಎಂದರೆ ಸಾಕ್ಷಿಯು ಸರಿ ಎನ್ನುತ್ತಾರೆ, ಸಾಕ್ಷಿಯು ಮುಂದುವರೆದು ಅವರು ಮಾಲೀಕರು ಇರುವುದು ಗೊತ್ತಿಲ್ಲ ಆದರೆ ದಾವಾ ಸ್ವತ್ತು ನಮ್ಮ ಹೆಸರಿನಲ್ಲಿದೆ ಎನ್ನುತ್ತಾರೆ. ಖರೀದಿ ಪತ್ರ ಮಾಡಿಕೊಟ್ಟ ನಂತರದಿಂದ ಬಾಳವ್ವ, ತುಳಸವ್ವ ಹಾಗೂ ನನ್ನ ತಂದೆಗೆ ದಾವಾ ಸ್ವತ್ತಿನಲ್ಲಿ ಹಕ್ಕು ಇರುವುದಿಲ್ಲ ಎಂದರೆ ಸರಿ. ನಿಮ್ಮ ತಂದೆಗೆ ದಾವಾ ಆಸ್ತಿಯ ಮೇಲೆ ಯಾವ ರೀತಿಯ ಅಧಿಕಾರ ಇರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ದಾವಾ ಸ್ವತ್ತಿನ ಮೇಲೆ ನಿಮಗೆ ಯಾವುದೇ ಹಕ್ಕು ಇಲ್ಲದಿದ್ದರೂ ಪ್ರತಿವಾದಿಗೆ ತೊಂದರೆ ನೀಡುವ ಉದ್ದೇಶದಿಂದ ಖೊಟ್ಟಿ ದಾವೆಯನ್ನು ಹಾಕಿರುತ್ತೀರಿ ಎಂದರೆ ಸರಿಯಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓದಿ ಹೇಳಿ ಕೇಳಿ ಸರಿಯಿದೆ.

ಸಹಿ/-

**4ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ,**
**ಮತ್ತು ಪ್ರ.ದ.ನ್ಯಾ.ದಂ. ಬೆಳಗಾವಿ.**